## ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಾರ್ಯಾಲಯ
ಸಂ.29, ವಿಜಯನಗರ 2 ನೇ ಹಂತ,
ಹಿನಕಲ್ ಮೈಸೂರು-570017
CIN: U40109KA2004SGC035177
Website: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಚಾಮುಂಡಿಪುರಂ ಉಪ-ವಿಭಾಗ,
66/11 KV ದಕ್ಷಿಣ ವಿದ್ಯುತ್ ವಿತರಣಾ ಕೇಂದ್ರ ಆವರಣ,
H.D ಕೋಟೆ-ಮಾನಂದವಾಡಿ ರಸ್ತೆ, ಮೈಸೂರು-570008.
aeecpm@cescmysore.org
ದೂರವಾಣಿ:0821-2488400


ಕ್ರಮ ಸಂಖ್ಯೆ:ಸಕಾನಿಇಂ(ವಿ)/ಸಲೆ/ಹಿಸ /ಚಾಉವಿ/2018-19/ 829 ದಿನಾಂಕ: 15/06/18.

ಲಗತ್ತು :

# ಸಭಾ ನಡಾವಳಿಗಳು

ದಿನಾಂಕ 26-05-2018 ನೇ ಶನಿವಾರ ಮಧ್ಯಾಹ್ನ 3-00 ಗಂಟೆಗೆ ಚಾಮುಂಡಿಪುರಂ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ವೃತ್ತ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು

1) ಶ್ರೀ.ಸೋಮರಾಜು, ಕಾ.ಇಂ(ವಿ) ಕಾ ಮತ್ತು ಪಾ ವೃತ್ತ, ಮೈಸೂರು.
2) ಶ್ರೀ.ಎಂ.ಕೆ.ಸೋಮಶೇಖರ್. ಕಾ.ಇಂ(ವಿ), ಕಾ ಮತ್ತು ಪಾ ಎನ್.ಆರ್.ಮೊಹಲ್ಲಾ ವಿಭಾಗ, ಮೈಸೂರು.
3) ಶ್ರೀ.ಆರ್.ಬಿ.ಕಿರಣ್ ಕುಮಾರ್, ಸ.ಕಾ.ಇಂ(ವಿ), ಚಾಮುಂಡಿಪುರಂ ಉಪವಿಭಾಗ, ಮೈಸೂರು.
4) ಶ್ರೀ.ಎಸ್.ರವಿ, ಪ್ರಭಾರ ಸಲೆ/ಹಿಸ
5) ಶ್ರೀಮತಿ.ಯು.ಜಿ.ಸವಿತಾ, ಸಇಂ(ತಾಂ)
6) ಶ್ರೀ.ರಕ್ಷತ್ ಎಂ.ಸಿಂಗ್, ಸ.ಇಂ(ವಿ), ವಿದ್ಯಾರಣ್ಯಪುರಂ ಶಾಖೆ.
7) ಶ್ರೀ.ಇ.ಮಂಜು, ಸ.ಇಂ(ವಿ), ಲಕ್ಷ್ಮಿಪುರಂ ಶಾಖೆ.
8) ಶ್ರೀ.ಲೋಕೇಶ್, ಸ.ಇಂ(ವಿ), ಕಡಕೊಳ ಶಾಖೆ.
9) ಶ್ರೀಮತಿ.ಬಿ.ಪಿ.ಶಾಲಿನಿ, ಕಿ.ಇಂ(ವಿ), ಜೆ.ಪಿ.ನಗರ ಶಾಖೆ.
10) ಶ್ರೀ.ರಾಮದಾಸ್, ಕಿ.ಇಂ(ವಿ), ಲಕ್ಷ್ಮಿಪುರಂ ಶಾಖೆ.
11) ಶ್ರೀ.ಶಿವಲಿಂಗು, ವಿದ್ಯಾರಣ್ಯಪುರಂ ಶಾಖೆ.

.....2.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿ

| ಕ್ರ. ಸಂ | ಹೆಸರು ವಿಳಾಸ ಮೊಬೈಲ್ ಸಂಖ್ಯೆ | ಅಹವಾಲು/ಮನವಿ | ಕ್ರಮ |
|---|---|---|---|
| 1. | ಶ್ರೀ.ಅಶ್ವಥ್ ನಾರಾಯಣ, ವಿದ್ಯುತ್ ಗುತ್ತಿಗೆದಾರರು ಮತ್ತು ಇಂಜಿನಿಯರ್. **9449833792** | ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಹಣ ಸಂದಾಯ ದಿನಗಳನ್ನು ಮಂಜೂರಾತಿ ಪತ್ರದ ದಿನಾಂಕದಿಂದ 30 ದಿನಗಳು ಎಂದು ಅಚ್ಚಾಗುತ್ತಿದ್ದು, ಅದನ್ನು ನಿಗಮದ ನಿಯಮಾನುಸಾರ 90 ದಿನಗಳು ಎಂದು ತಿದ್ದುಪಡಿ ಮಾಡಿಕೊಡಲು ಕೋರಲಾಯಿತು. | ಇದಕ್ಕೆ ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು ಮಂಜೂರಾತಿ ಪತ್ರದಲ್ಲಿ ತಿದ್ದುಪಡಿ ಮಾಡಬೇಕೆಂದು ತಿಳಿಸಿದರು. |
| | | ಗೃಹಬಳಕೆಗಾಗಿ ವಿದ್ಯುತ್ ಸಂಪರ್ಕ ತೆಗೆದು ಕೊಳ್ಳಲು Sanction Plan ನೀಡಲಾಗುತ್ತಿದ್ದು, ಇದು 2 ವರ್ಷಗಳಿಗಷ್ಟೇ ಸೀಮಿತವಾಗಿರುತ್ತದೆ.ನಿಗಮದ ನಿಯಮಾನುಸಾರ Sanction Plan ನೀಡುವ ಬದಲಿಗೆ ಖಾತೆಯನ್ನು ಮಾತ್ರ ಪಡೆದು ವಿದ್ಯುತ್ ಸಂಪರ್ಕ ನೀಡಲು ಕೋರಿದರು. | ಇದನ್ನು ಕುರಿತು ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು ನಿಯಮಾನು ಸಾರ ಪರಿಶೀಲಿಸುವುದಾಗಿ ತಿಳಿಸಿದರು. |
| | | Infosys Software ನಲ್ಲಿ ವಿದ್ಯುತ್ ಸಂಪರ್ಕ ನೀಡುವ ಎಲ್ಲಾ ಪ್ರಕ್ರಿಯೆ ಮಾಡಲಾಗುತ್ತಿದ್ದು, ಈ Software ಗೆ Reliance Net ಇರುತ್ತದೆ. ಈ ಅಂತರ್ಜಾಲ Down ಆದರೆ ಎಲ್ಲಾ ಕೆಲಸಗಳು ಬಾಕಿ ಉಳಿಯುತ್ತಿರುವುದು ತೊಂದರೆಯಾಗುತ್ತಿರು ವುದಾಗಿ, ಇದಕ್ಕೆ ವ್ಯವಸ್ಥೆ ಮಾಡಿಕೊಡಲು ಕೋರಿದರು. | ಇದಕ್ಕೆ ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು Reliance Net Work ಜೊತೆ ಬದಲಿ ವ್ಯವಸ್ಥೆಗಾಗಿ BSNL Net Work ನಿಂದ ಕೆಲಸ ನಿರ್ವಹಿಸಲು ಸೂಕ್ತ ಕ್ರಮ ತೆಗೆದು ಕೊಳ್ಳುವುದಾಗಿ ತಿಳಿಸಿದರು. |
| | | ನಿಗಮದ ನಿಯಮಾನುಸಾರ 7.5 K.V.ವರೆಗೆ ವಿದ್ಯುತ್ ಸಂಪರ್ಕ ಪಡೆಯಲು ಗುತ್ತಿಗೆದಾರರ ಅವಶ್ಯಕತೆ ಇಲ್ಲವಾದ್ದರಿಂದ, ಗ್ರಾಮಾಂತರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಣೆಯ Software (BCITS) ನಲ್ಲಿ ವಿದ್ಯುತ್ ಗುತ್ತಿಗೆದಾರರ ವಿವರವನ್ನು ಅರ್ಜಿ ನೊಂದಾಯಿಸಲು ಕಡ್ಡಾಯವಾಗಿರುತ್ತದೆ. ಇದನ್ನು ಐಚ್ಛಿಕವಾಗಿ ಮಾಡಲು ಕೋರಿದರು. | ಇದನ್ನು ಕುರಿತು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ನಿಗಮದ ನಿಯಮಾನುಸಾರ ಕ್ರಮ ವಹಿಸುವುದಾಗಿ ತಿಳಿಸಿದರು. |

| | | | |
|---|---|---|---|
| 2. | ಶ್ರೀ.ಬಿ.ರವಿಕುಮಾರ್<br>9739568568 | ಇವರು ಹೊಸದಾಗಿ ಮನೆ ನಿರ್ಮಾಣ ಮಾಡಿದ್ದು, ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಕಟ್ಟಡದ ವಿಸ್ತೀರ್ಣ 500 Sq.Mtr. ಗಿಂತ ಹೆಚ್ಚಾಗಿದ್ದು, Clause 3.1.3(A) ಪ್ರಕಾರ ತಮ್ಮ ಸ್ಥಳದಲ್ಲಿ ಪರಿವರ್ತಕವನ್ನು ಅಳವಡಿಸಲು ಜಾಗವನ್ನು ಉಚಿತವಾಗಿ ನೀಡಲು ತಿಳಿಸಲಾಗಿದ್ದು, ಸದರಿಯವರು ನೆಲಮಾಳಿಗೆಯಲ್ಲಿ ಸ್ಥಳಾವಕಾಶ ಮಾಡಿಕೊಡುವುದಾಗಿ ವಿದ್ಯುತ್ ಸಂಪರ್ಕ ನೀಡಲು ಕೋರಲಾಯಿತು. | ಇದನ್ನು ಕುರಿತು ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು ನೆಲ ಮಾಳಿಗೆಯಲ್ಲಿ Dry Type ಪರಿವರ್ತಕವನ್ನು ಮಾತ್ರ ಅಳವಡಿಸಲು ಅವಕಾಶವಿದ್ದು, ಇದರ ಕುರಿತು ಪರಿಶೀಲಿಸಿ ತಿಳಿಸುವುದಾಗಿ ತಿಳಿಸಿದರು. |
| 3. | ಶ್ರೀ.ಕೆಂಪರಾಜೇ ಅರಸ್<br>7892656165 | ಚಾಮುಂಡಿಪುರಂ ಉಪವಿಭಾಗ ಕಛೇರಿಗೆ ಬರುವ ರಸ್ತೆಯು ಮಣ್ಣಿನ ರಸ್ತೆಯಾಗಿದ್ದು, ಮಳೆ ಬಂದಾಗ ರಸ್ತೆಯು ಬದಿಯಾಗಿ, ಹಿರಿಯ ನಾಗರೀಕರು ಕಛೇರಿಗೆ ಬರುವಾಗ ಮತ್ತು ತೆರಳುವಾಗ ತುಂಬಾ ತೊಂದರೆಯಾಗುತ್ತಿರುವುದಾಗಿ ಡಾಂಬಾರಿನ ರಸ್ತೆ ನಿರ್ಮಿಸಲು ಕೋರಿದರು. ಹಾಗೂ ಮಾನಂದವಾಡಿ ಹೆದ್ದಾರಿ ರಸ್ತೆ ವಿಭಜಕವನ್ನು ಮಾಡಲಾಗಿದ್ದು, ಇದರಿಂದ ಅಪಘಾತವಾಗುವುದನ್ನು ತಡೆಯಲು ಬ್ಯಾರಿಕೇಡರ್ ಹಾಕಲು ಕೋರಿದರು. | ಇದಕ್ಕೆ ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು ಈಗಾಗಲೇ ಡಾಂಬರಿನ ರಸ್ತೆ ನಿರ್ಮಾಣಕ್ಕಾಗಿ MCC ವತಿಯಿಂದ ಟೆಂಡರಿನ ಹಂತದಲ್ಲಿರುವುದಾಗಿ ತಿಳಿಸಿದರು. ಮತ್ತು ವಿಭಜಕ ಮಾಡಿರುವ ಮಾನಂದವಾಡಿ ಹೆದ್ದಾರಿ ರಸ್ತೆಯ ಎರಡು ಬದಿಗಳಲ್ಲಿ ಬ್ಯಾರಿಕೇಡರ್ ವ್ಯವಸ್ಥೆ ನೀಡಲು ಸಂಬಂಧಿಸಿದ ಪೋಲೀಸ್ ಠಾಣಾ ವ್ಯಾಪ್ತಿಗೆ ತಿಳಿಸುವುದಾಗಿ ತಿಳಿಸಿದರು. |
| 4. | ಶ್ರೀ.ವಿಶ್ವನಾಥ್<br>9964987092 | ಕೃಷ್ಣ ಬೇಕರಿ ಹತ್ತಿರ ಜೈನ್ ಭವನ್ ಹಿಂಭಾಗದಲ್ಲಿ ಇವರ ಮನೆ ಇದ್ದು, ಈ ವ್ಯಾಪ್ತಿಯಲ್ಲಿ ಹೆಚ್ಚು ವಿದ್ಯುತ್ ಅಡಚಣೆಯಾಗುತ್ತಿದ್ದು ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | ಇದಕ್ಕೆ ಕಾರ್ಯನಿರ್ವಾಹಕ - ಇಂಜಿನಿಯರ್(ವಿ) ರವರು ಆ ವ್ಯಾಪ್ತಿ ಸಂಬಂಧಿಸಿದ ಸಹಾಯಕ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ವಿದ್ಯುತ್ ಅಡಚಣೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. |

ಎಲ್ಲರಿಗೂ ವಂದಿಸಿ ಸಭೆಯನ್ನು ಸಂಜೆ 6-30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಚಾಮುಂಡಿಪುರಂ ಉಪವಿಭಾಗ,
ಮೈಸೂರು.

ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಲಾಗಿದೆ.

1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ವೃತ್ತ, ಕುವೆಂಪುನಗರ, ಚಾ.ವಿ.ಸ.ನಿ.ನಿ., ಮೈಸೂರು.

[illegible] ವಿಭಾಗ, ಚಾ.ವಿ.ಸ.ನಿ.ನಿ.,ಮೈಸೂರು.

3) ಸಹಾಯಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ವಿದ್ಯಾರಣ್ಯಪುರಂ /ಲಕ್ಷ್ಮಿಪುರಂ / ಕಡಕೊಳ ರವರ ಮಾಹಿತಿಗಾಗಿ.

4) ಕಿರಿಯ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ವಿದ್ಯಾರಣ್ಯಪುರಂ / ಜೆ.ಪಿ.ನಗರ / ಲಕ್ಷ್ಮಿಪುರಂ ರವರ ಮಾಹಿತಿಗಾಗಿ.

5) ಕಛೇರಿ ಪ್ರತಿ.